Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court

## Previous Year Paper (Mains) District Judge (Civil Law) 10 Apr 2022

Teachingninja.in

# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POST OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗೆ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CIVIL LAW
ದಿವಾಣಿ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 09.04.2022** — **Max. Marks: 150**
ದಿನಾಂಕ: 09.04.2022 — ಗರಿಷ್ಟ ಅಂಕಗಳು: 150

**TIME: 02-00 pm to 05.00 pm**
ಸಮಯ: ಮಧ್ಯಾಹ್ನ 02.00 ರಿಂದ 05.00 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:

***Main Examination:***
***The Competitive Written Examination for recruitment of District Judges shall consist of:-***

*(i)* ***Written Examination of two papers each of three hours duration with 150 maximum marks of each paper-one in Civil Law and another in Criminal Law.***

*(ii)* ***It is compulsory for all candidates to answer at least one of the papers in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.***

Teachingninja.in

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

*ಮುಖ್ಯ ಪರೀಕ್ಷೆ:*

*ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-*

*(i)* *ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.*

*(ii)* *ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.*

*2) If there is any difference in the question in English language and Kannada language, the question framed in English language shall prevail.*

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

*3). Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

*ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.*

**1. Frame proper issues on the basis of the following pleadings.** **15 Marks**

## GIST OF PLAINT

The plaintiff is the son of Late Nagaraj from his second wife, Smt. Lalithamma. The defendant No.1 and 2 are the sons of Late



Teachingninja.in

Nagaraj from his first wife, Smt. Rajamma. After the death of his first wife Smt. Rajamma, Sri Nagaraj married Smt. Lalithamma and plaintiff was born from the said wedlock. The suit schedule properties are the ancestral and joint family properties of their family and plaintiff has got 1/3rd share over the same. In spite of the repeated request and demand, defendants have refused to allot the plaintiffs share over the suit schedule properties. This made the plaintiff to file the suit.

With the above averments in the plaint, plaintiff claimed a decree for partition and separate possession of his 1/3rd share over the suit schedule properties and also for mesne profits.

## GIST OF WRITTEN STATEMENT

The defendants, in their written statement, admitted that they are the sons of Late Nagaraja and Smt. Rajamma and denied other plaint averments regarding their father Nagaraja marrying Smt. Lalithamma after the death of defendants mother and the plaintiff as the son of Late Nagaraj and suit properties as their ancestral and joint family property and plaintiff having right to claim share over the suit property. According to the defendants, there was no marriage between their father Nagaraj and plaintiffs mother Smt. Lalithamma and plaintiff is not the legitimate son of Late Nagaraj. The defendants further contended that suit properties are the self acquired properties of their father Sri Nagaraj, as he purchased the same from his own earnings. The defendants further contended that their father, during his life time, bequeathed the suit properties in their favour, vide Registered Will dated 17.08.2012 and on the basis of the said Will, defendants



Teachingninja.in

become the absolute owners of the suit properties. The defendants further contended that they have a sister by name Jyothi, who is a necessary party to this suit. The suit is barred by limitation. The suit is not properly valued and requite court fee is not paid on the plaint. This Court has no territorial jurisdiction to try this suit. On all these grounds, defendants prayed for dismissal of the suit with costs.

**ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ಸೂಕ್ತ ವಿವಾದಾಂಶಗಳನ್ನು ರೂಪಿಸಿರಿ:** **15 ಅಂಕಗಳು**

<u>ವಾದಪತ್ರದ ಸಾರಾಂಶ</u>

ವಾದಿಯು ಮೃತ ನಾಗರಾಜರವರಿಗೆ ಅವರ ಎರಡನೇ ಹೆಂಡತಿ ಶ್ರೀಮತಿ ಲಲಿತಮ್ಮನವರಿಂದ ಹುಟ್ಟಿದ ಮಗನಾಗಿರುತ್ತಾನೆ. ಒಂದು ಮತ್ತು ಎರಡನೇ ಪ್ರತಿವಾದಿಯರು ಮೃತ ನಾಗರಾಜರವರಿಗೆ ಅವರ ಮೊದಲನೇ ಹೆಂಡತಿ ಶ್ರೀಮತಿ ರಾಜಮ್ಮನವರಿಂದ ಹುಟ್ಟಿದ ಗಂಡು ಮಕ್ಕಳಾಗಿರುತ್ತಾರೆ. ತನ್ನ ಮೊದಲನೇ ಹೆಂಡತಿ ಶ್ರೀಮತಿ ರಾಜಮ್ಮ ತೀರಿಕೊಂಡ ಬಳಿಕ ಶ್ರೀ ನಾಗರಾಜರವರು ಶ್ರೀಮತಿ ಲಿಲಿತಮ್ಮನವರನ್ನು ಮದುವೆ ಮಾಡಿಕೊಂಡಿದ್ದು ಆ ವೈವಾಹಿಕ ಸಂಬಂಧದಿಂದ ವಾದಿಯು ಹುಟ್ಟಿದ್ದನು. ದಾವಾ ಷೆಡ್ಯೂಲ್ ಆಸ್ತಿಗಳು ಅವರ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಯಾಗಿದ್ದು ವಾದಿಗೆ ಅದರಲ್ಲಿ 1/3ನೇ ಹಿಸ್ಸೆ ಇರುತ್ತದೆ. ಸಾಕಷ್ಟು ಬಾರಿ ವಿನಂತಿ ಮತ್ತು ಬೇಡಿಕೆಯ ಹೊರತಾಗಿಯೂ ಪ್ರತಿವಾದಿಯರು ವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ಆತನ ಹಿಸ್ಸೆಯನ್ನು ಕೊಡಲು ನಿರಾಕರಿಸಿದ್ದರು. ಇದು ವಾದಿಗೆ ಈ ದಾವಾ ಹೂಡುವಂತೆ ಮಾಡಿತು.

ವಾದಪತ್ರದಲ್ಲಿ ಈ ಮೇಲಿನ ಅಂಶಗಳನ್ನು ಹೇಳಿ ವಾದಿಯು ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ತನಗಿರುವ 1/3ನೇ ಹಿಸ್ಸೆಯನ್ನು ವಿಭಾಗಿಸಿ ಅದರ ಪ್ರತ್ಯೇಕ ಸ್ವಾಧೀನವನ್ನು ಕೊಡಲು ಮತ್ತು ಮಧ್ಯಂತರ ಲಾಭಾಂಶಕ್ಕಾಗಿ ಡಿಕ್ರಿ ಕೋರಿರುತ್ತಾನೆ.

<u>ಪ್ರತಿವಾದ ಪತ್ರದ ಸಾರಾಂಶ</u>

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ತಾವು ಮೃತ ನಾಗರಾಜ ಮತ್ತು ಶ್ರೀಮತಿ ರಾಜಮ್ಮನ ಗಂಡು ಮಕ್ಕಳು ಎಂದು ಒಪ್ಪಿಕೊಂಡು ವಾದಪತ್ರದ ಇತರ ಅಂಶಗಳಾದ ತಮ್ಮ ತಾಯಿಯ ಮರಣಾ ನಂತರ ಅವರ ತಂದೆ ನಾಗರಾಜ ಶ್ರೀಮತಿ ಲಲಿತಮ್ಮನನ್ನು ಮದುವೆ ಮಾಡಿಕೊಂಡಿರುವುದು ಮತ್ತು ವಾದಿಯು ಮೃತ ನಾಗರಾಜರ ಮಗ ಎಂಬುವುದನ್ನು ಮತ್ತು ದಾವಾ ಆಸ್ತಿಗಳು ಅವರ ಪಿತ್ರಾರ್ಜಿತ ಮತ್ತು



Teachingninja.in

ಒಟ್ಟು ಕುಟುಂಬದ ಆಸ್ತಿ ಎಂಬುದನ್ನು ಮತ್ತು ವಾದಿಗೆ ದಾವಾ ಆಸ್ತಿಗಳ ಮೇಲೆ ಹಿಸ್ಸೆ ಕೇಳಲು ಹಕ್ಕು ಇರುವುದನೆಲ್ಲ ನಿರಾಕರಿಸಿರುತ್ತಾರೆ. ಪ್ರತಿವಾದಿಯರ ಪ್ರಕಾರ ತಮ್ಮ ತಂದೆ ನಾಗರಾಜ ಮತ್ತು ವಾದಿಯ ತಾಯಿ ಶ್ರೀಮತಿ ಲಲಿತಮ್ಮನ ನಡುವೆ ಯಾವುದೇ ಮದುವೆಯಾಗಿಲ್ಲ ಮತ್ತು ವಾದಿಯು ಮೃತ ನಾಗರಾಜರವರ ಕಾನೂನುಬದ್ಧ ಮಗ ಆಗಿರುವುದಿಲ್ಲ. ಪ್ರತಿವಾದಿಯರು ಮುಂದುವರಿದು ದಾವಾ ಆಸ್ತಿಗಳು ಅವರ ತಂದೆ ಶ್ರೀ ನಾಗರಾಜರವರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿರುವ ಅವರ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳುತ್ತಾರೆ. ಪ್ರತಿವಾದಿಯರು ಮುಂದುವರಿದು ತಮ್ಮ ತಂದೆ ಅವರ ಜೀವಿತ ಕಾಲದಲ್ಲಿ ದಿನಾಂಕ 17.8.2012ರ ನೊಂದಾಯಿತ ಉಯಿಲುನಾಮೆಯ ಮೂಲಕ ದಾವಾ ಆಸ್ತಿಗಳನ್ನು ತಮ್ಮ ಪರವಾಗಿ ಉಯಿಲು ಮಾಡಿದ್ದು ಆ ಉಯಿಲುನಾಮೆಯ ಆಧಾರದ ಮೇಲೆ ತಾವು ದಾವಾ ಆಸ್ತಿಗಳ ಸಂಪೂರ್ಣ ಮಾಲೀಕರಾಗಿರುತ್ತೇವೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಮುಂದುವರಿದು ತಮಗೆ ಜ್ಯೋತಿ ಎನ್ನುವ ಓರ್ವ ಸಹೋದರಿ ಇದ್ದು ಆಕೆ ಈ ದಾವಾಕ್ಕೆ ಅವಶ್ಯಕ ಪಕ್ಷದಾರಳು ಎಂದು ಹೇಳುತ್ತಾರೆ. ಈ ದಾವೆಯು ಕಾಲಮಿತಿ ಭಾದೆಗೆ ಒಳಪಟ್ಟಿರುತ್ತದೆ. ಈ ದಾವಾವನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಮತ್ತು ಸೂಕ್ತ ನ್ಯಾಯಾಲಯ ಶುಲ್ಕವನ್ನು ವಾದಪತ್ರದೊಂದಿಗೆ ಪಾವತಿ ಮಾಡಿಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ನಡೆಸಲು ಈ ನ್ಯಾಯಾಲಯಕ್ಕೆ ಪ್ರಾದೇಶಿಕ ಕಾರ್ಯವ್ಯಾಪ್ತಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿರುತ್ತಾರೆ.

**2. Translate the following passage as extracted from a Judgment to Kannada language:** **15 Marks**

**ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.** **15 ಅಂಕಗಳು**

From the submissions made on behalf of the Respondent – Pre – University College at Udupi and the material placed on record, we notice that all was well with the dress code since 2004. We are also impressed that even Muslims participate in the festivals that are celebrated in the 'Asta Mutt Sampradaya' (Udupi being the place where eight Mutts are situated). We are dismayed as to how all of a sudden that too in the middle of the academic term the issue of *Hizab* is generated and blown out of proportion by



Teachingninja.in

the powers that be. The way, *Hizab* imbroglio unfolded gives scope for the argument that some *'unseen hands'* are at work to engineer social unrest and disharmony. Much is not necessary to specify. We are not commenting on the ongoing police investigation *lest* it should be affected. We have perused and returned copies of the police papers that were furnished to us in a sealed cover. We expect a speedy and effective investigation into the matter and culprits been brought to book, brooking no delay.

**3. Translate the following passage as extracted from a deposition to English language:** **15 Marks**

**ಈ ಕೆಳಕಂಡ ಸಾಕ್ಷಿ ಹೇಳಿಕೆಯ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ದಾವಾ ಸ್ವತ್ತು ಮಹಾನಗರ ಪಾಲಿಕೆ ವ್ಯಾಪ್ತಿಗೆ ಯಾವಾಗ ಬಂತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ನಿಶಾನೆ ಡಿ.6ರಲ್ಲಿ ನನಗೆ ಆಸ್ತಿಯನ್ನು ಖರೀದಿ ಕೊಟ್ಟವರ ಹೆಸರು ಬರೆದಿಲ್ಲ. ನಿಶಾನೆ ಡಿ.6 ರಲ್ಲಿ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ನಮೂದು ಮಾಡಿಲ್ಲ ಎನ್ನುವುದು ನಿಜ. ನಿಶಾನೆ ಡಿ.6ರ ಮೂಲಕ ಕಟ್ಟಿರುವ ಕಂದಾಯ ಯಾವ ವರ್ಷದ್ದು ಎಂದು ನಮೂದು ಆಗಿಲ್ಲ. ನಾನು ಕಂದಾಯವನ್ನು ಒಂದು ವರ್ಷ ಮಾತ್ರ ಕಟ್ಟಿದ್ದೆನು. ನಿಶಾನೆ ಡಿ.6 ದಾವಾ ಸ್ವತ್ತಿಗೆ ಸಂಬಂಧಪಟ್ಟಿದಲ್ಲ ಎನ್ನುವುದು ನಿಜವಲ್ಲ. ನಿಶಾನೆ ಡಿ.6ನ್ನು ನಾನು ಈ ದಾವಾಗೋಸ್ಕರ ಸೃಷ್ಟಿಸಿದ್ದೇನೆ ಎನ್ನುವುದು ನಿಜವಲ್ಲ. ನಿಶಾನೆ ಡಿ.7ರಿಂದ 21 ದಾಖಲಾತಿಗಳು ಈ ದಾವಾ ಸಲ್ಲಿಸಿದ ನಂತರ ಆದಂತಹ ದಾಖಲೆಗಳು ಎನ್ನುವುದು ನಿಜ. ಈ ದಾವದಲ್ಲಿ ನನ್ನ ಪರವಾಗಿ ಹಾಜರಾಗಿರುವ ವಕೀಲರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರವಾಗಿಯೂ ಕೂಡ ಹಾಜರಾಗುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಈ ದಾಖಲಾತಿಗಳನ್ನು ನಾನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿರುತ್ತೇನೆ ಎನ್ನುವುದು ನಿಜವಲ್ಲ. ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ 1998ನೇ ಸಾಲಿನಲ್ಲಿ ಆಗಿದೆ ಎಂದರೆ ಸಾಕ್ಷಿ ಅದನ್ನು ನಾನು ಪರಿಶೀಲಿಸಬೇಕು ಎಂದು ಹೇಳುತ್ತಾರೆ.

**4.** What particulars shall be contained in a plaint? Explain the special requirements in plaint relating to money suit, representative suit and suit in respect of an immovable property with reference to the relevant provision of law **10 Marks**



Teachingninja.in

ವಾದಪತ್ರದಲ್ಲಿ ಒಳಗೊಂಡಿರಲೇ ಬೇಕಾದ ವಿವರಗಳು ಯಾವುದು? ಹಣ ವಸೂಲಾತಿ ದಾವೆ, ಪ್ರತಿನಿಧಿ ದಾವೆ ಮತ್ತು ಸ್ಥಿರಾಸ್ತಿಗೆ ಸಂಬಂಧಿಸಿದ ದಾವೆಗಳ ವಾದಪತ್ರದಲ್ಲಿ ಒಳಗೊಂಡಿರಬೇಕಾದ ವಿಶೇಷ ಅವಶ್ಯಕತೆಗಳನ್ನು ಅವುಗಳಿಗೆ ಸಂಬಂಧಪಟ್ಟಂತಹ ಕಾನೂನುಗಳ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**5.** Discuss about granting of Injunctions under Specific Relief Act, 1963, with reference to relevant provisions. State as to when an injunction can not be granted as per the said Act? **10 Marks**

ನಿರ್ದಿಷ್ಟ ಪರಿಹಾರ ಅಧಿನಿಯಮ. 1963ರ ಅಡಿಯಲ್ಲಿ ನಿರ್ಭಂದಕಾಜ್ಞೆಗಳನ್ನು ಕೊಡುವ ಬಗ್ಗೆ ಅವುಗಳಿಗೆ ಸಂಬಂಧಪಟ್ಟಂತಹ ನಿಭಂದನೆಗಳನ್ನು ಉಲ್ಲೇಖಿಸಿ ಚರ್ಚಿಸಿ. ಆ ಅಧಿನಿಯಮದ ಅಡಿಯಲ್ಲಿ ನಿರ್ಭಂದಕಾಜ್ಞೆಗಳನ್ನು ಯಾವಾಗ ನಿರಾಕರಿಸಬಹುದು ಎನ್ನುವುದನ್ನು ತಿಳಿಸಿ? **10 ಅಂಕಗಳು**

**6.** Enumerate the documents that have to be compulsorily registered as per the Indian Registration Act, 1908. What is the effect of non-registration of documents required to be registered? Explain with reference to the relevant provisions of law. **10 Marks**

ಭಾರತೀಯ ನೊಂದಣಿ ಕಾಯಿದೆ 1908ರ ಅಡಿಯಲ್ಲಿ ಯಾವ ದಸ್ತಾವೇಜುಗಳನ್ನು ಕಡ್ಡಾಯವಾಗಿ ನೊಂದಣಿ ಮಾಡಬೇಕು ಎನ್ನುವುದನ್ನು ವಿವರಿಸಿ. ನೊಂದಣಿ ಮಾಡಲೇಬೇಕಾದ ದಸ್ತಾವೇಜುಗಳು ನೊಂದಣಿ ಆಗದೇ ಇದ್ದಲ್ಲಿ ಅದರ ಪರಿಣಾಮಗಳು ಯಾವುದು? ಸಂಬಂಧಪಟ್ಟ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**7.** Narrate the grounds on which a decree of divorce can be granted under the Hindu Marriage Act, 1955. Explain with reference to the relevant provision of law. **10 Marks**

ಹಿಂದೂ ವಿವಾಹ ಕಾಯಿದೆ, 1955ರ ಅಡಿಯಲ್ಲಿ ವಿವಾಹ ವಿಚ್ಛೇದನಾ ಡಿಕ್ರಿಯನ್ನು ಮಂಜೂರು ಮಾಡಲು ಆಧಾರಗಳನ್ನು ನಿರೂಪಿಸಿ. ಸಂಬಂಧಪಟ್ಟ ಕಾನೂನಿನ ನಿಭಂದನೆಗಳನ್ನು ಉಲ್ಲೇಖಿಸಿ ವಿವರಿಸಿ. **10 ಅಂಕಗಳು**

**8.** State the main features of the Commercial Courts Act, 2015. What are the Special Procedures adopted under the said Act for speedy disposal of the Commercial Disputes? **10 Marks**

ವಾಣಿಜ್ಯ ನ್ಯಾಯಾಲಯಗಳ ಕಾಯಿದೆ, 2015ರ ಮುಖ್ಯ ಲಕ್ಷಣಗಳನ್ನು ತಿಳಿಸಿ. ವಾಣಿಜ್ಯ ವಿವಾಧಗಳ ಶೀಘ್ರ ಇತ್ಯರ್ಥಕ್ಕಾಗಿ ಆ ಕಾಯಿದೆಯ ಅಡಿಯಲ್ಲಿ ಅಳವಡಿಸಿಕೊಂಡ ವಿಶೇಷ ಪ್ರಕ್ರಿಯೆಗಳು ಯಾವುದು? **10 ಅಂಕಗಳು**

**9.** How and to what extent Constitution of India can be amended? Discuss with reference to the views of the Supreme Court in various decisions in this regard. **10 Marks**



Teachingninja.in

ಭಾರತೀಯ ಸಂವಿಧಾನವನ್ನು ಯಾವ ರೀತಿ ಮತ್ತು ಯಾವ ಪ್ರಮಾಣದಲ್ಲಿ ತಿದ್ದುಪಡಿ ಮಾಡಬಹುದು? ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ತನ್ನ ವಿವಿಧ ತೀರ್ಪಿನಲ್ಲಿ ವ್ಯಕ್ತ ಪಡಿಸಿರುವ ಅಭಿಪ್ರಾಯಗಳನ್ನು ಉಲ್ಲೇಖಿಸಿ ಚರ್ಚಿಸಿ. **10 ಅಂಕಗಳು**

**10.** Which specific provisions of law have to be invoked under the following circumstances: **1 X 10= 10 Marks**

a) To file a representative suit.

b) To file a suit for declaration and injunction to prevent public nuisance or other wrongful act affecting the public.

c) To permit the decree holder to bid for or purchase the property in Court auction.

d) Procedure to be followed when the witness failed to comply with summons to give evidence.

e) To stay the execution of an appealable decree by the Court which passed the decree.

f) Computation of fresh period of Limitation when acknowledgment of liability is made in writing.

g) To decide the issue relating payment of court fee before recording the evidence on merits under the Karnataka Court Fees and Suit Valuation Act, 1958.

h) Procedure to prove the execution of a Will, when the attesting witnesses not found.

i) To issue writ in the nature of mandamus by the Supreme Court.

j) To obtain interim injunction from the Court during Arbitral proceedings.

ಈ ಕೆಳಗಿನ ಸಂದರ್ಭಗಳಲ್ಲಿ ನಿರ್ದಿಷ್ಟವಾಗಿ ಕಾನೂನಿನ ಯಾವ ನಿಭಂದನೆಗಳನ್ನು ಉಲ್ಲೇಖಿಸಬೇಕು **1 X 10 = 10 ಅಂಕಗಳು**

a) ಪ್ರತಿನಿದಿ ದಾವೆಯನ್ನು ಸಲ್ಲಿಸಲು

b) ಸಾರ್ವಜನಿಕರ ಮೇಲೆ ಪರಿಣಾಮ ಉಂಟು ಮಾಡುವ ಸಾರ್ವಜನಿಕ ಉಪದ್ರವಗಳು ಅಥವಾ ಇತರ ಅಕ್ರಮ ಕೃತ್ಯಗಳನ್ನು ತಡಯಲು ಘೋಷಣೆಗಾಗಿ ಮತ್ತು ನಿರ್ಭಂದಕಾಜ್ಞೆಗಾಗಿ ದಾವಾ ಹೂಡಲು.



Teachingninja.in

c) ನ್ಯಾಯಾಲಯದ ಹರಾಜು ಪ್ರಕ್ರಿಯೆಯಲ್ಲಿ ಡಿಕ್ರಿದಾರನಿಗೆ ಆಸ್ತಿಗೆ ಹರಾಜು ಕೂಗಲು ಮತ್ತು ಖರೀದಿ ಮಾಡಲು ಪರವಾನಿಗೆ ಕೊಡಲು.

d) ಸಾಕ್ಷಿಯು ಸಾಕ್ಷ್ಯ ಹೇಳಲು ನೀಡಿದ ಸಮನ್ಸ್ ಅನ್ನು ಅನುಸರಿಸಲು ವಿಫಲರಾದಾಗ ಅನುಸರಿಸಬೇಕಾದ ಕಾರ್ಯವಿಧಾನಗಳು.

e) ಡಿಕ್ರಿ ಮಾಡಿದ ನ್ಯಾಯಾಲಯವೇ ಅಪೀಲು ಸಲ್ಲಿಸಬಹುದಾದಂತಹ ಡಿಕ್ರಿಯ ಅಮಲ್ಜಾರಿಯನ್ನು ತಡೆಹಿಡಿಯಲು.

f) ಬರಹದಲ್ಲಿ ಹೊಣೆಗಾರಿಕೆಯ ಬಗ್ಗೆ ಸ್ವೀಕಾರ ಪತ್ರವನ್ನು ನೀಡಿದಾಗ ಹೊಸದಾದ ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವುದು.

g) ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವಾ ಮೌಲ್ಯಮಾಪನ ಕಾಯಿದೆ, 1958ರ ಅಡಿಯಲ್ಲಿ ಹಕ್ಕುಗಳ ಅರ್ಹತೆಯ ಬಗ್ಗೆ ಸಾಕ್ಷ್ಯವನ್ನು ದಾಖಲಿಸುವ ಮೊದಲು ನ್ಯಾಯಾಲಯ ಶುಲ್ಕ ಪಾವತಿಯ ಬಗ್ಗೆ ಇರುವ ವಿವಾದಾಂಶವನ್ನು ತೀರ್ಮಾನಿಸಲು.

h) ದೃಢೀಕರಣ ಸಾಕ್ಷಿಯು ದೊರಕದೆ ಇದ್ದಾಗ ಉಯಿಲುನಾಮೆ ಬರೆದಿರುವುದನ್ನು ಸಾಬೀತು ಪಡಿಸುವ ವಿಧಾನ.

i) ಸರ್ವೋಚ್ಚ ನ್ಯಾಯಾಲಯವು ಮ್ಯಾಂಡಮಸ್ ಸ್ವರೂಪದ ರಿಟ್‌ನ್ನು ಹೊರಡಿಸಲು.

j) ಮಧ್ಯಸ್ಥಿಕಾ ಪ್ರಕರಣದಲ್ಲಿ ನ್ಯಾಯಾಲಯದಿಂದ ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಪಡೆಯಲು.

**11.** Briefly explain the legal principles involved in **ANY THREE** of the following decisions: **3 x 5= 15 Marks**

a) Indian Young Lawyers Association Vs State of Kerala. (2019) 11 SCC 1.

b) Justice K.S.Puttaswamy (Retd) and another Vs. Union of India and others. 2017 10 SCC 1

c) Shayara Bano vs Union of India and others. AIR 2017 9 SCC 1 (SC)

d) Vineeta Sharma vs Rakesh Sharma and others. (2020) 9 SCC 1

e) Smt. Resham vs State of Karnataka and others. (W.P.No.2347/2022, Dated: 15.03.2022)



Teachingninja.in

ಈ ಕೆಳಗಿನ ಪೈಕಿ **<u>ಯಾವುದಾದರು ಮೂರು</u>** ತೀರ್ಪುಗಳಲ್ಲಿ ಒಳಗೊಂಡಿರುವ ಕಾನೂನಿನ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ: **3 x 5= 15** ಅಂಕಗಳು

ಎ) ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್ ವಿರುದ್ಧ ಕೇರಳ ರಾಜ್ಯ
(2019) 11 ಎಸ್‌ಸಿಸಿ 1

ಬಿ) ಜಸ್ಟೀಸ್ ಕೆ.ಎಸ್.ಪುಟ್ಟಸ್ವಾಮಿ (ನಿವೃತ್ತ) ಮತ್ತು ಇನ್ನೋರ್ವ ವಿರುದ್ಧ
ಯೂನಿಯನ್ ಆಫ್ ಇಂಡಿಯ ಮತ್ತು ಇತರರು (2017) 10 ಎಸ್‌ಸಿಸಿ 1

ಸಿ) ಶಾಯರ ಬಾನು ವಿರುದ್ಧ ಯೂನಿಯನ್ ಆಫ್ ಇಂಡಿಯ ಮತ್ತು ಇತರರು
ಎಐಆರ್ 2017 9 ಎಸ್‌ಸಿಸಿ 1(ಎಸ್‌ಸಿ)

ಡಿ) ವಿನೀತ್ ಶರ್ಮ ವಿರುದ್ಧ ರಾಕೇಶ ಶರ್ಮ ಮತ್ತು ಇತರರು
(2020) 9 ಎಸ್‌ಸಿಸಿ 1

ಇ) ಶ್ರೀಮತಿ ರೇಶಮ್ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು
(ಡಬ್ಲ್ಯೂ ಪಿ ನಂ.2347/2022, ದಿನಾಂಕ 15.03.2022)

**12. Write an order on the interim application filed under Order VI Rule 17 of the Code of Civil Procedure, 1908, on the basis of following facts and circumstances:** **20 Marks**

The plaintiff filed a suit claiming the decree for Specific Performance by directing the defendant to execute the registered sale deed in his favour.

2. The defendant filed the written statement. To prove the issues, *both the parties have let in their oral and documentary* evidence. When the case is set down for final arguments, plaintiff filed an application under Order 6 Rule 17 of the Code of Civil Procedure, 1908 with prayer to permit him to amend the plaint.

3. By way of proposed amendment, plaintiff wants to insert following sentence to the relief column of the plaint, after relief No.1:

**1A. Alternatively, if the Court comes to the conclusion that plaintiff is not entitle for a decree for specific performance, Court may order for refund**



Teachingninja.in

**of sale advance amount of Rs.4,00,000/- with interest at the rate of 12% per anum from the date of sale agreement till repayment.**

4. In the affidavit filed in support of the application, plaintiff contended that at the time of filing the suit, he failed to seek the alternative prayer for refund of sale advance by oversight and due to inadvertence. In a suit for specific performance, claiming alternative relief for refund of sale advance is not a new relief and it will not change the nature and scope of the suit. As per Section 22(2) of the Specific Relief Act, 1963, when the plaintiff has not claimed the relief for refund of sale advance; such relief shall not be granted by the Court. As per proviso to Section 22(2) of the Specific Relief Act, 1963, when the plaintiff has not claimed the relief for refund of sale advance the Court shall allow him to amend the plaint to include a claim for such relief at any stage of the suit. The proposed amendment is necessary for determining the real questions in controversy between the parties. On all these grounds, the plaintiff prayed to permit him to amend the plaint.

5. The defendant filed objection to the said application and contended that there is delay and latches on the part of the plaintiff in introducing the proposed amendment, as it is moved only when the suit is set down for final arguments. As per Order VI Rule 17 of the Code of Civil Procedure, 1908, no application for amendment shall be allowed after trial has commenced, unless the Court comes to the conclusion that in spite of due diligence, the party could not have raised the matter before the commencement of trial. The plaintiff has not offered any explanation for he not making attempt



Teachingninja.in

to amend the plaint before the commencement of trial. By way of proposed amendment, plaintiff is seeking new relief and it will change the nature and scope of this suit. The new relief to be claimed by the plaintiff by way of proposed amendment is barred by limitation, as application is filed three years after filing the suit. The new relief to be claimed by way of proposed amendment is also barred under Order 2 Rule 2 of Code of Civil Procedure, 1908 as the plaintiff will be prevented from claiming any new relief which he omits to claim at the filing the suit without the leave of the Court. The proposed amendment is unwarranted at this stage of the suit, as the relief for refund of sale advance can be granted by the Court without there being a specific prayer, as it is a lesser relief than the relief for specific performance. On all these grounds, defendant prayed to reject the application.

**ಈ ಕೆಳಗಿನ ಸಂಗತಿಗಳು ಮತ್ತು ಸಂದರ್ಭಗಳ ಆಧಾರದ ಮೇಲೆ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ 6 ನಿಯಮ 17ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯ ಮೇಲೆ ಆದೇಶವನ್ನು ಬರೆಯಿರಿ:** **20 ಅಂಕಗಳು**

ವಾದಿಯು ತನ್ನ ಪರವಾಗಿ ನೊಂದಾಯಿತ ಖರೀದ ಪತ್ರವನ್ನು ಬರೆದುಕೊಡಲು ಪ್ರತಿವಾದಿಗೆ ನಿರ್ದೇಶನವನ್ನು ಕೋರಿ ನಿರ್ದಿಷ್ಟ ಪರಿಪಾಲನಾ ಡಿಕ್ರಿಗಾಗಿ ದಾವೆಯನ್ನು ಸಲ್ಲಿಸಿದ್ದನು.

2. ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದನು. ವಿವಾದಾಂಶಗಳನ್ನು ಸಾಬೀತು ಪಡಿಸಲು ಉಭಯ ಪಕ್ಷಗಾರರು ತಮ್ಮ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಹಾಜರು ಪಡಿಸಿದ್ದರು. ದಾವೆಯು ಅಂತಿಮ ವಾದಕ್ಕಾಗಿ ನಿಗದಿ ಪಡಿಸಿದ್ದಾಗ ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ 1908ರ ಅದೇಶ 6 ನಿಯಮ 17ರ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ ವಾದಪತ್ರಕ್ಕೆ ತಿದ್ದುಪಡಿಯನ್ನು ಕೋರಿದ್ದನು.



Teachingninja.in

3. ಉದ್ದೇಶಿತ ತಿದ್ದುಪಡಿಯ ಪ್ರಕಾರ ವಾದಿಯು ವಾದ ಪತ್ರದ ಪರಿಹಾರದ ಕಾಲಂನಲ್ಲಿ ಒಂದನೇ ಪರಿಹಾರ ಆದ ಬಳಿಕ ಈ ಕೆಳಗಿನ ವಾಕ್ಯವನ್ನು ಸೇರಿಸಲು ಬಯಸಿದ್ದನು.

> **1ಎ. ಪರ್ಯಾಯವಾಗಿ, ಈ ನ್ಯಾಯಾಲಯವು ವಾದಿಯು ನಿರ್ದಿಷ್ಟ ಪರಿಪಾಲನೆಯ ಡಿಕ್ರಿಗೆ ಅರ್ಹನಲ್ಲ ಎಂದು ತೀರ್ಮಾನಕ್ಕೆ ಬಂದಲ್ಲಿ ಖರೀದಿ ಮುಂಗಡ ಹಣವಾದ ರೂ.4,00,000/–ವನ್ನು ಖರೀದಿ ಕರಾರು ಪತ್ರವಾದ ದಿನದಿಂದ ಮರುಪಾವತಿ ಆಗುವವರೆಗೆ ವಾರ್ಷಿಕ ಶೇಕಡ 12ರ ದರದ ಬಡ್ಡಿಯಂತೆ ಮರುಪಾವತಿ ಮಾಡಲು ಆದೇಶಿಸಬೇಕು.**

4. ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ವಾದಿಯು ಈ ದಾವಾ ಸಲ್ಲಿಸುವ ಕಾಲದಲ್ಲಿ ಆತನು ಕಣ್ತಪ್ಪಿನಿಂದ ಮತ್ತು ಅಚಾತುರ್ಯದಿಂದ ಮುಂಗಡ ಖರೀದಿ ಹಣದ ಮರುಪಾವತಿಗಾಗಿ ಪರ್ಯಾಯ ಪರಿಹಾರವನ್ನು ಕೇಳಿರಲಿಲ್ಲ. ನಿರ್ದಿಷ್ಟ ಪರಿಪಾಲನಾ ದಾವೆಯಲ್ಲಿ ಮುಂಗಡ ಖರೀದಿ ಹಣದ ಮರುಪಾವತಿಯ ಪರಿಹಾರವನ್ನು ಪರ್ಯಾಯವಾಗಿ ಕೇಳುವುದು ಹೊಸ ಪರಿಹಾರ ಆಗುವುದಿಲ್ಲ ಮತ್ತು ಅದು ದಾವೆಯ ಸ್ವಭಾವ ಮತ್ತು ಸ್ವರೂಪವನ್ನು ಬದಲಾಯಿಸುವುದಿಲ್ಲ. ನಿರ್ದಿಷ್ಟ ಪರಿಹಾರ ಕಾಯಿದೆ, 1963ರ ಕಲಂ 22(2)ರ ಪ್ರಕಾರ ವಾದಿಯು ಮುಂಗಡ ಖರೀದಿ ಹಣದ ಮರುಪಾವತಿಯ ಪರಿಹಾರವನ್ನು ಕೇಳದೇ ಇದ್ದಾಗ ನ್ಯಾಯಾಲಯವು ಅಂತಹ ಪರಿಹಾರವನ್ನು ಕೊಡತಕ್ಕುದಲ್ಲ ಎಂಬುದಾಗಿದೆ. ನಿರ್ದಿಷ್ಟ ಪರಿಹಾರ ಕಾಯಿದೆ, 1963ರ ಕಲಂ 22(2)ರ ಸಹನಿಭಂದನೆಯ ಪ್ರಕಾರ ವಾದಿಯು ಮುಂಗಡ ಖರೀದಿ ಹಣದ ಮರುಪಾವತಿಯ ಪರಿಹಾರವನ್ನು ಕೇಳದೇ ಇದ್ದಾಗ ದಾವೆಯ ಯಾವುದೇ ಹಂತದಲ್ಲಿ ಆತನಿಗೆ ವಾದಪತ್ರವನ್ನು ತಿದ್ದುಪಡಿ ಮಾಡಿ ಆ ಪರಿಹಾರವನ್ನು ಸೇರಿಸಲು ನ್ಯಾಯಾಲಯವು ಅವಕಾಶ ನೀಡಲೇಬೇಕು ಎಂಬುದಾಗಿದೆ. ಉದ್ದೇಶಿತ ತಿದ್ದುಪಡಿಯು ಪಕ್ಷಗಾರರ ನಡುವೆ ವಿವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸಲು ಅವಶ್ಯಕವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ವಾದಿಯು ವಾದಪತ್ರವನ್ನು ತಿದ್ದುಪಡಿ ಮಾಡಲು ಪರವಾನಿಗೆ ಕೋರಿರುತ್ತಾನೆ.

5. ಪ್ರತಿವಾದಿಯು ಈ ಅರ್ಜಿಗೆ ತಕರಾರನ್ನು ಹಾಕಿದ್ದು ಈ ದಾವಾವು ಅಂತಿಮ ವಾದಕ್ಕೆ ನಿಗದಿ ಪಡಿಸಿರುವಾಗ ವಾದಿಯು ಈ ತಿದ್ದುಪಡಿಯನ್ನು ಪ್ರಸ್ತಾಪಿಸಿರುವುದು ವಾದಿಯು ವಿಳಂಬ ಮತ್ತು ತಪ್ಪು ಮಾಡಿರುವುದು ತೋರಿಸುತ್ತದೆ ಎನ್ನುತ್ತಾರೆ. ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ 6 ನಿಯಮ 17ರ ಪ್ರಕಾರ ಸಾಕ್ಷಿ ವಿಚಾರಣೆ ಪ್ರಾರಂಭವಾದ ನಂತರ ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಸಾಕ್ಷಿ ವಿಚಾರಣೆಯ ಪ್ರಾರಂಭದ ಪೂರ್ವದಲ್ಲಿ ಈ ವಿಷಯವನ್ನು ಎತ್ತಲು ಆಗುತ್ತಿರಲಿಲ್ಲ ಎಂಬ ನಿರ್ಣಯಕ್ಕೆ ನ್ಯಾಯಾಲಯವು ಬರದ ಹೊರತು ತಿದ್ದುಪಡಿಯ ಯಾವುದೇ ಅರ್ಜಿಯನ್ನು ಅನುಮತಿಸಲು ಆಗುವುದಿಲ್ಲ. ವಾದಿಯು ಸಾಕ್ಷಿ ವಿಚಾರಣೆ ಪ್ರಾರಂಭವಾಗುವ ಮೊದಲು ವಾದ ಪತ್ರವನ್ನು ತಿದ್ದುಪಡಿ ಮಾಡಲು ಪ್ರಯತ್ನ ಮಾಡದೇ



Teachingninja.in

ಇರುವ ಬಗ್ಗೆ ಯಾವುದೇ ಸೂಕ್ತವಾದ ವಿವರಣೆಯನ್ನು ಕೊಟ್ಟಿರುವುದಿಲ್ಲ. ಉದ್ದೇಶಿತ ತಿದ್ದುಪಡಿಯ ಪ್ರಕಾರ ವಾದಿಯು ಹೊಸ ಪರಿಹಾರವನ್ನು ಕೇಳುತ್ತಿದ್ದಾನೆ ಮತ್ತು ಅದು ಈ ದಾವೆಯ ಸ್ವಭಾವ ಮತ್ತು ಸ್ವರೂಪವನ್ನು ಬದಲಾಯಿಸುತ್ತದೆ. ಈ ಅರ್ಜಿಯನ್ನು ದಾವಾ ಸಲ್ಲಿಸಿದ ಮೂರು ವರ್ಷಗಳ ನಂತರ ಸಲ್ಲಸಿರುವುದರಿಂದ ಉದ್ದೇಶಿತ ತಿದ್ದುಪಡಿಯ ಮೂಲಕ ವಾದಿಯು ಕೇಳುವ ಹೊಸ ಪರಿಹಾರ ಕಾಲಮಿತಿ ಭಾದೆಗೆ ಒಳಪಟ್ಟಿದೆ. ದಾವಾ ಸಲ್ಲಿಸುವ ಕಾಲಕ್ಕೆ ಯಾವುದೇ ಪರಿಹಾರವನ್ನು ನ್ಯಾಯಾಲಯದ ಪರವಾನಿಗೆ ಇಲ್ಲದೇ ಕೈಬಿಟ್ಟಲ್ಲಿ ಅಂತಹ ಪರಿಹಾರವನ್ನು ವಾದಿಯು ಮತ್ತೆ ಕೇಳಲು ಆಗುವುದಿಲ್ಲವಾದ್ದರಿಂದ ಉದ್ದೇಶಿತ ತಿದ್ದುಪಡಿಯ ಮೂಲಕ ಕೇಳುವ ಹೊಸ ಪರಿಹಾರವು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ 2 ಮತ್ತು ನಿಯಮ 2ರ ಅಡಿಯಲ್ಲಿನ ಭಾದೆಗೆ ಒಳಪಟ್ಟಿರುತ್ತದೆ. ನಿರ್ದಿಷ್ಟ ಪರಿಪಾಲನಾ ಪರಿಹಾರಕ್ಕಿಂತ ಮುಂಗಡ ಹಣ ಮರು ಪಾವತಿಯ ಪರಿಹಾರ ಚಿಕ್ಕ ಪರಿಹಾರವಾಗಿರುವುದರಿಂದ ನ್ಯಾಯಾಲಯವು ಆ ಪರಿಹಾರವನ್ನು ಕೇಳದೇ ಇದ್ದರೂ ಕೂಡ ನೀಡಬಹುದಾಗಿರುವುದರಿಂದ ದಾವೆಯ ಈ ಹಂತದಲ್ಲಿ ಉದ್ದೇಶಿತ ತಿದ್ದುಪಡಿಯ ಅವಶ್ಯಕತೆ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾನೆ.

********



Teachingninja.in